ದಿನಾಂಕಃ 29-06-2026 ರಂದು ಮಧ್ಯಂತರ ಅರ್ಜಿಯ ಮೇರೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ **1** ನೇ ಪ್ರತಿವಾದಿ ಪರ ಶ್ರೀ ಐ ಎಮ್ ಕೆ ವಕೀಲರಿಂದಃ

2. ಎಫ್ ಡಿ ಪಿ ನಂಬರ 4/2002 ರ ಡಿಕ್ರಿಯ ಧೃಡೀಕೃತ ನಕಲು ನಿಡಿ. 22 ಎಂದು, ಅಮಲು ಜಾರಿ ಸಂಖ್ಯೆ 213/2016 ರ ಅರ್ಜಿ, ಆದೇಶದ ಹಾಳೆ, ಧೃಡೀಕೃತ ನಕಲನ್ನು ನಿಡಿ. 23 ಮತ್ತು 24 ಎಂದು ಗುರುತಿಸಲಾಯಿತು. ಡ ನಂಬರ 1542 ಮತ್ತು 2102 ರ ಮ್ಯೂಟೇಶನನ ಧೃಡೀಕೃತ ನಕಲನ್ನು ನಿಡಿ. 25 ಮತ್ತು 26 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ ಎಮ್ ಬಿ ಬಿ ವಕೀಲರಿಂದ ಃ

3. ನಿಡಿ. 22 ರ ಪ್ರಕಾರ ದುಂಡಪ್ಪ ತಂದೆ ಶೇಷಪ್ಪ ಪಿಂಜಾರ ಫೆಡರಲ್ ಬ್ಯಾಂಕ್ ಹುಬ್ಬಳ್ಳಿ ಶಾಖೆಯಲ್ಲಿ ಸಾಲ ಪಡೆದಿದ್ದರು ಎಂದರೆ ಗೊತ್ತಿಲ್ಲ, ಸಾಲಕ್ಕೆ ನನ್ನ ತಂದೆ ಮತ್ತು ನಾನು ಜಾಮೀನುದಾರರು ಆಗಿದ್ದೇವು ಎಂದರೆ, ನಾನು ಆಗಿಲ್ಲ, ನನ್ನ ತಂದೆ ಜಾಮೀನುದಾರರಾಗಿದ್ದರು. ಓ ಎಸ್ ನಂಬರ 305-1999 ರ ತೀರ್ಪು ಮತ್ತು ಡಿಕ್ರಿ ಹಾಜರು ಪಡಿಸಿಲ್ಲ ಎಂದರೆ, ಹಾಜರು ಪಡಿಸಿದ್ದೇನೆ. ನನ್ನ ತಕರಾರಿನಲ್ಲಿ ಫೆಡರಲ್ ಬ್ಯಾಂಕನಲ್ಲಿ ಸಾಲ ಇದ್ದು, ನಾನು ಜಾಮೀನುದಾರ ಆಗಿದ್ದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಸದರಿ ಸಾಲ ವಸೂಲಿ ಸಂಬಂಧ ಅಮಲು ಜಾರಿ ಸಂಖ್ಯೆ 213/2016 ರಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿ ಜನತಾ ನ್ಯಾಯಾಲಯದಲ್ಲಿ ನಿಖಾಲಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿ ಎಷ್ಟು ಮೊತ್ತಕ್ಕೆ ನಿಖಾಲಿ ಆಗಿದೆ ಎಂದು ಹಣ ತುಂಬಿದ ರಸೀದಿ ಹಾಜರು ಪಡಿಸಿಲ್ಲ ಎಂದರೆ, ಹಾಜರು ಪಡಿಸಿದ್ದೇನೆ. ಸದರಿ ಹಣವನ್ನು ದುಂಡಪ್ಪ ತಿರುವಳಿ ಮಾಡಿದ್ದಾರೆ, ನಾವು ಮಾಡಿಲ್ಲ ಎಂದರೆ ಸರಿಯಲ್ಲ. ಹಣ ತುಂಬದ ಕಾರಣ ನಮ್ಮ ಬಳಿ ರಸೀದಿ ಇಲ್ಲ ಹಾಗೂ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಅಮಲು ಜಾರಿ ಅರ್ಜಿ ಇತ್ತು, ಅದು ನಿಖಾಲಿ ಆಗಿದೆ ಎಂದು, ಹಣ ನಾವೇ ತುಂಬಿದ ಬಗ್ಗೆ ನನ್ನ ತಕರಾರಿನಲ್ಲಿ ಬರೆಸಿಲ್ಲ ಎಂದರೆ ಸರಿ. ನಿಡಿ. 22 ರಿಂದ 24 ಈ ಪ್ರಕರಣಕ್ಕೆ ಸಂಬಂಧಪಡದೇ ಇದ್ದರೂ ಹಾಜರು ಪಡಿಸಿದ್ದೇವೆ ಎಂದರೆ ಸರಿಯಲ್ಲ.

4. ನಿಡಿ. 25 ರ ಬಗ್ಗೆ ಯಾವುದೇ ವಾಟ್ನಿ ಪತ್ರ ನೋಂದಣಿ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ. 25 ಕ್ಕೆ ಸಂಬಂಧ ಪಟ್ಟಂತೆ ನನ್ನ ಸಹೋದರಿಯರು ಸಮ್ಮತಿ ಕೊಟ್ಟಿಲ್ಲ ಎಂದರೆ ಸರಿ. ನಾನು, ನನ್ನ ತಂದೆ ಹಾಗೂ ನನ್ನ ತಮ್ಮ ಸೇರಿ ನಿಡಿ. 25 ನ್ನು ಖೊಟ್ಟಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಡಿ. 25 ರ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನಿಡಿ. 26 ಕ್ಕೂ ಸಹ ಯಾವುದೇ ವಾಟ್ನಿ ಪತ್ರ ನೋಂದಣಿ ಆಗಿಲ್ಲ ಎಂದರೆ ಸರಿ. ನಿಡಿ. 26 ಕ್ಕೆ ಸಂಬಂಧ ಪಟ್ಟಂತೆ ನನ್ನ ಸಹೋದರಿಯರು ಸಮ್ಮತಿ ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು, ನನ್ನ ತಂದೆ ಹಾಗೂ ನನ್ನ ತಮ್ಮ ಸೇರಿ ನಿಡಿ. 26 ನ್ನು ಖೊಟ್ಟಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಡಿ. 26 ರ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನನ್ನ ಸಹೋದರಿಯರಿಗೆ ಆಸ್ತಿ ಕೊಡಬಾರದು ಎಂಬ ಉದ್ದೇಶದಿಂದ ನಿಡಿ. 25 ಮತ್ತು 26 ನ್ನು ಸೃಷ್ಟಿಸಿ ಹಾಜರು ಪಡಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.